



# ಲಂಬನ

## ಅಲಂಕಾರಕ್ಕೂ, ಔಷಧಕ್ಕೂ..!

★ ಚಿತ್ರ-ಬರಹ: ಪ್ರಸಾದ್ ಮೈರ್ಕಳ



ಚಪ್ಪರ, ಕಮಾನು, ಎತ್ತರದ ಮರಕ್ಕೂ ಹಬ್ಬುವ ಈ ಬಳ್ಳಿ ಹಳದಿ ಬಣ್ಣದಲ್ಲೇ ಹೆಚ್ಚು ಕಾಣಸಿಗುತ್ತದೆ. ಹೆಸರು– ಲಂಬನ. ಮಲಯಾಳಂನಲ್ಲಿ ಗಿಂಡಿ ಪೂ, ಕೊಂಡೆ ಪೂ ಎಂದೂ ಇಂಗ್ಲಿಷ್‌ನಲ್ಲಿ ಗೋಲ್ಡನ್ ಟ್ರಂಪೆಟ್ ಎಂದೂ ಕರೆಯುತ್ತಾರೆ. ಅಪೋಸಿನಾಸಿ ಕುಟುಂಬಕ್ಕೆ ಸೇರಿದ ಈ ಬಳ್ಳಿ ನೇರಳೆ ಮತ್ತು ಕೆಂಪು ಬಣ್ಣಗಳಲ್ಲೂ ಕಾಣಿಸಿಕೊಳ್ಳುತ್ತದೆ.

ಸಾಮಾನ್ಯವಾಗಿ ವರ್ಷದ ಎಲ್ಲಾ ಸಮಯಗಳಲ್ಲಿ ಸಮೃದ್ಧವಾಗಿ ದೊಡ್ಡ ಹೂಗಳಿಂದ ನಳನಳಿಸುವ ಲಂಬನ ಬಳ್ಳಿ ಅಲಂಕಾರಿಕವೂ ಹೌದು, ಔಷಧೀಯ ಸಸ್ಯವೂ ಹೌದು. ಬೇಕಾದ ರೀತಿಯಲ್ಲಿ ಕತ್ತರಿಸಿ ಚಂದವಾದ ಆಕಾರವನ್ನು ಕೊಡಬಹುದು. ರೆಂಬೆಯ ತುದಿಯಲ್ಲಿ ಗುಚ್ಛಗಳಂತೆ ಅರಳುವ ದೊಡ್ಡ ಗಾತ್ರದ ಬಣ್ಣದ ಹೂಗಳು ಆಕರ್ಷಕ. ರೆಂಬೆಯಲ್ಲಿ ಸಾಧಾರಣ 3, 4 ಎಲೆಗಳಿರುತ್ತವೆ. ಇದರ ಕಾಯಿ, ಮುಳ್ಳು ಮುಳ್ಳಾಗಿ ಅಪರೂಪವಾಗಿ ಕಾಣಸಿಗುತ್ತದೆ.

ಎಲೆಯನ್ನು ಮುರಿದಾಗ ಒಸರುವ ಹಾಲನ್ನು ಉಗುರುಸುತ್ತಿಗೆ ಬಿಂದುಗಳಂತೆ ಬಿಟ್ಟರೆ ಉಗುರುಸುತ್ತು ಗುಣವಾಗುತ್ತದೆ. ಮಾಂಸ ಖಂಡಗಳ ನೋವು, ಸಂದುಗಳ ಸೆಳೆತಗಳಿಗೆ ಲಂಬನ ಎಲೆ, ಒಂದು ಚಮಚ ಜೀರಿಗೆ, ಒಂದು ಹಿಡಿ ದಾಸವಾಳ ಎಲೆ, ತಣ್ಣೀರು ಸೇರಿಸಿ ಅರೆದು ದಿನಕ್ಕೆ ಮೂರು ಗಂಟೆಯಂತೆ ಮೂರು ದಿನಗಳ ಕಾಲ ಲೇಪಿಸಿದರೆ ಸೆಳೆತ ಗುಣವಾಗುತ್ತದೆ. ಲಂಬನ ಹೂ ದೇವರ ಪೂಜೆಗೂ ಜನಪ್ರಿಯ.

ನರ್ಸರಿ, ಪೇಟೆಗಳಲ್ಲಿ ಸಿಗುವ ಹೊಸ ತರದ ಹೂ ಗಿಡಗಳ ಎದುರು ಇಂತಹ ಔಷಧೀಯ, ಅಲಂಕಾರಿಕ ಸಸ್ಯಗಳ ಪರಿಚಯವೇ ಇಲ್ಲದಾಗುತ್ತಿದೆ. ನಮ್ಮ ಅಂಗಳದಲ್ಲೋ ಹಿತ್ತಿಲಲ್ಲೋ ಬೆಳೆದು ನಿಂತಿರುವ ಸಸ್ಯಗಳು ನಮಗೆ ಈಗ ಮದ್ದಲ್ಲ. ದುಡ್ಡು ತೆತ್ತು ನರ್ಸರಿಗಳಿಂದ ಗಿಡಗಳನ್ನು ತಂದು ಶ್ರಮಪಟ್ಟು ಬೆಳೆಸುವ ಬದಲು ಹೆಚ್ಚಿನ ಆರೈಕೆ ಬೇಡದ ಇಂತಹ ಹೂ ಗಿಡ, ಬಳ್ಳಿಗಳನ್ನು ಬೆಳೆಸಿದರೆ ಸಸ್ಯಗಳು ಉಳಿಯಬಹುದು.